**ಕರ್ನಾಟಕ ವಿಧಾನ ಪರಿಷತ್ತು**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 648 (864)
ಸದಸ್ಯರ ಹೆಸರು : ಶ್ರೀ ಚಿದಾನಂದ ಎಂ ಗೌಡ (ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ : 16-12-2024
ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು; ಅವುಗಳಿಗೆ ಮಂಜೂರಾಗಿರುವ ಗ್ರಂಥಪಾಲಕರ ಹುದ್ದೆಗಳ ಸಂಖ್ಯೆ ಎಷ್ಟು; ಕಾರ್ಯನಿರ್ವಹಿಸುತ್ತಿರುವ ಗ್ರಂಥಪಾಲಕರ ಸಂಖ್ಯೆ ಎಷ್ಟು: | ರಾಜ್ಯದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ : 1238<br>ಮಂಜೂರಾದ ಗ್ರಂಥಪಾಲಕರ ಹುದ್ದೆಗಳ ಸಂಖ್ಯೆ : 124<br>ಕಾರ್ಯನಿರ್ವಹಿಸುತ್ತಿರುವ ಗ್ರಂಥಪಾಲಕರ ಸಂಖ್ಯೆ : 101 |
| ಆ) | ಪದವಿ ಪೂರ್ವ ಕಾಲೇಜುಗಳ ಗ್ರಂಥಪಾಲಕರ ಹುದ್ದೆಗಳನ್ನು ಬೋಧಕರ ಹುದ್ದೆಯನ್ನಾಗಿ ಪರಿಗಣಿಸಲಾಗಿದೆಯೇ; ಪರಿಗಣಿಸಲಾಗಿದ್ದರೆ ಸದರಿ ಆದೇಶವನ್ನು ನೀಡುವುದು; | ಸರ್ಕಾರದ ಆದೇಶ ಸಂಖ್ಯೆ: ಇಡಿ 68 ಟಿಪಿಯು 2006 ದಿನಾಂಕ:14/06/2007 ರನ್ವಯ ಕೆಲವು ಷರತ್ತುಗಳಿಗೆ ಒಳಪಟ್ಟು ಗ್ರಂಥಪಾಲಕರ ಹುದ್ದೆಗಳನ್ನು "ಬೋಧಕ" (Non vocational) ಹುದ್ದೆಯನ್ನಾಗಿ ಪರಿಗಣಿಸಿ ಆದೇಶಿಸಲಾಗಿರುತ್ತದೆ. ಆದೇಶದ ಪ್ರತಿಯನ್ನು **ಅನುಬಂಧ**ದಲ್ಲಿ ಒದಗಿಸಿದೆ. |
| ಇ) | ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು ಮತ್ತು ಉಪನ್ಯಾಸಕರ ವರ್ಗಾವಣೆಗೆ ಯಾವ ವಿಧಾನವನ್ನು ಅನುಸರಿಸಲಾಗುತ್ತಿದೆ; ಗ್ರಂಥಪಾಲಕರ ವರ್ಗಾವಣೆಗೆ ಯಾವ ನಿಯಮವನ್ನು ಅನುಸರಿಸಲಾಗುತ್ತಿದೆ; | ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು ಮತ್ತು ಉಪನ್ಯಾಸಕರ ವರ್ಗಾವಣೆಗೆ, ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ಪ್ರಾಂಶುಪಾಲರು ಮತ್ತು ಉಪನ್ಯಾಸಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2022 ರನ್ವಯ ವರ್ಗಾವಣೆ ವಿಧಾನವನ್ನು ಅನುಸರಿಸಲಾಗುತ್ತಿದೆ. ಆದ್ದರಿಂದ ಉಪನ್ಯಾಸಕರ (ಬೋಧಕರ) ಲಭ್ಯತೆಯನ್ನು ಖಚಿತ ಪಡಿಸಿ ಕ್ರಮಕೈಗೊಳ್ಳುವುದಕ್ಕೆ, ನೇರ ನೇಮಕಾತಿ, ಬಡ್ತಿ, ವರ್ಗಾವಣೆಗಳನ್ನು ಕೌನ್ಸೆಲಿಂಗ್ ಮೂಲಕ ನಡೆಸಲು ಅಧಿಸೂಚಿಸಲಾಗಿರುತ್ತದೆ. ಅದರಂತೆ ನಿಯಮಗಳು ರಚನೆಯಾಗಿರುತ್ತವೆ.<br>ಗ್ರಂಥಪಾಲಕರ ವರ್ಗಾವಣೆಗೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಕಾಲ ಕಾಲಕ್ಕೆ ಹೊರಡಿಸಲಾಗುವ ವರ್ಗಾವಣೆ ಮಾರ್ಗಸೂಚಿಗಳನ್ನು ಅನುಸರಿಸಲಾಗುತ್ತಿದೆ. |
| ಈ) | ಪ್ರಾಂಶುಪಾಲರು, ಉಪನ್ಯಾಸಕರ ರೀತಿಯಲ್ಲಿ ಗ್ರಂಥಪಾಲಕರನ್ನು ಗಣಕೀಕೃತ | ಗ್ರಂಥಪಾಲಕರ ಹುದ್ದೆಗಳನ್ನು ಸರ್ಕಾರದ ಆದೇಶ ಸಂಖ್ಯೆ:ಇಡಿ 68 ಟಿಪಿಯು 2006 ದಿನಾಂಕ:14/06/2007 |

| | | |
|---|---|---|
| | ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಮಾಡಲು ಸರ್ಕಾರಕ್ಕೆ ಇರುವ ಸಮಸ್ಯೆಯೇನು; ಗ್ರಂಥಪಾಲಕರ ವರ್ಗಾವಣೆಯನ್ನು ಗಣಕೀಕೃತ ಕೌನ್ಸಿಲಿಂಗ್ ಮೂಲಕ ಮಾಡುವುದಕ್ಕೆ ಸರ್ಕಾರ ಕೈಗೊಳ್ಳುವ ಕ್ರಮವೇನು? | ರನ್ವಯ ಕೆಲವು ಷರತ್ತುಗಳಿಗೆ ಒಳಪಟ್ಟು "ಬೋಧಕ" (Non Vocational) ಹುದ್ದೆಯನ್ನಾಗಿ ಪರಿಗಣಿಸಿ ಆದೇಶಿಸಲಾಗಿರುತ್ತದೆ.<br>ಸದರಿ ಹುದ್ದೆಗಳು ಪೂರ್ಣವಾದ ಬೋಧಕರೆಂದು ಪರಿಗಣಿತವಾಗಿರುವುದಿಲ್ಲ.<br>ಗ್ರಂಥಪಾಲಕರು ಉಪನ್ಯಾಸಕರಲ್ಲದೇ ಇರುವುದರಿಂದ ಗ್ರಂಥಪಾಲಕರ ವರ್ಗಾವಣೆಗೆ ಪ್ರತ್ಯೇಕ ಅಧಿನಿಯಮ ಇರುವುದಿಲ್ಲ. ಆದಾಗ್ಯೂ ಗ್ರಂಥಪಾಲಕರ ಸಾಮಾನ್ಯ ವರ್ಗಾವಣೆಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಕಾಲ ಕಾಲಕ್ಕೆ ಹೊರಡಿಸಲಾಗುವ ವರ್ಗಾವಣೆ ಮಾರ್ಗಸೂಚಿಗಳನ್ನು ಅನುಸರಿಸಲಾಗುತ್ತಿದೆ. ಸದರಿ ನಿಯಮಗಳಲ್ಲಿ ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಮಾಡಲು ಅವಕಾಶ ಕಲ್ಪಿಸಿರುವುದಿಲ್ಲ. |

ಸಂಖ್ಯೆ: ಇಪಿ 439 ಡಿಜಿಡಬ್ಲೂ 2024

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ಅನುಬಂಧ

ವಿಷಯ : ಕರ್ನಾಟಕ ರಾಜ್ಯದ ಪದವಿ ಪೂರ್ವ ಕಾಲೇಜುಗಳಲ್ಲಿನ ಗ್ರಂಥಪಾಲಕರ ಹುದ್ದೆಗಳನ್ನು ಬೋಧಕ ಹುದ್ದೆಗಳೆಂದು ಪರಿಗಣಿಸುವ ಬಗ್ಗೆ.

ಓದಲಾಗಿದೆ: 1) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ದಿ:28-6-2006ರ ಸಭೆಯ ನಡವಳಿ.

2) ಸರ್ಕಾರಿ ಆದೇಶ ಸಂಖ್ಯೆ. ಇಡಿ 9 ಯುಜಿಸಿ 92, ದಿನಾಂಕ:27-6-1988.

3) ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆಯ ಪತ್ರ ಸಂಖ್ಯೆ. ಪಪೂಶಿಇ/ ಸಿಬ್ಬಂದಿ-1/ಹುತು/06-07, ದಿನಾಂಕ: 12-4-2007.

* * * * *

ಪ್ರಸ್ತಾವನೆ :-

ದಿನಾಂಕ: 28-6-2006 ರಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಗ್ರಂಥಪಾಲಕರ ಹುದ್ದೆಯನ್ನು ಬೋಧಕ ವೃಂದವೆಂದು ಪರಿಗಣಿಸಬೇಕೆಂದು ನಿರ್ಣಯಿಸಿ, ಈ ಬಗ್ಗೆ ಸೂಕ್ತವಾಗಿ ಸಂಬಂಧಪಟ್ಟ ವೃಂದ ಮತ್ತು ನೇಮಕಾತಿ ನಿಯಮಗಳನ್ನು ತಿದ್ದುಪಡಿ ಮಾಡಲು ಸೂಚಿಸಲಾಗಿದೆ. ಅದರಂತೆ ಮೇಲೆ (3) ರಲ್ಲಿ ಓದಲಾದ ಪ್ರಸ್ತಾವನೆಯಲ್ಲಿ ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ, ರವರು ಪದವಿ ಪೂರ್ವ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗೂ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿನ ಗ್ರಂಥಪಾಲಕರ ಹುದ್ದೆಯನ್ನು ಬೋಧಕ (ನಾನ್ ವೆಕೇಷನಲ್) ಹುದ್ದೆಗಳೆಂದು ಪರಿವರ್ತಿಸಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯಲ್ಲಿ ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರು ಗ್ರಂಥಾಲಯಗಳು ಶೈಕ್ಷಣಿಕ ವ್ಯವಸ್ಥೆಯ ಅವಿಭಾಜ್ಯ ಅಂಗಗಳು. ಗ್ರಂಥಾಲಯ ಮತ್ತು ಗ್ರಂಥಪಾಲಕರಿಲ್ಲದೆ ಶಿಕ್ಷಣ ಪರಿಪೂರ್ಣಗೊಳ್ಳುವುದಿಲ್ಲ. ಸಾಂಪ್ರದಾಯಿಕವಾಗಿ ತರಗತಿ ಕೊಠಡಿಯಲ್ಲಿ ಬೋಧನೆ ನೀಡುವುದಕ್ಕೆ ಮಾತ್ರ ಸೀಮಿತಗೊಳಿಸಿದಲ್ಲಿ ಇಂದಿನ ಯುವ ಪೀಳಿಗೆ ಸಂತೃಪ್ತಿಪಟ್ಟುಕೊಳ್ಳುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಅದು ತವಕಪಡುತ್ತದೆ. ಆ ಕಾರಣಕ್ಕಾಗಿ ಶಿಕ್ಷಣದಲ್ಲಿ ಗ್ರಂಥಾಲಯ ವಿಷಯವು ಈಗ ಅನಿವಾರ್ಯವಾಗಿದ್ದು, ಅವಿಬಾಜ್ಯ ಅಂಗವಾಗಿದೆ ಎಂದು ತಿಳಿಸಿರುತ್ತಾರೆ. ಮುಂದುವರೆದು ಗ್ರಂಥಪಾಲಕರು ನಿರ್ವಹಿಸುವ ಮಾಹಿತಿ ಸಂಗ್ರಹ ಸೇವೆ (information collection service) ಪರಾಮರ್ಶಿಕ ಸೇವೆ (Reference service) ತಾಂತ್ರಿಕ ಸೇವೆ (Technical service) ಪ್ರತ್ಯುತ್ಪಾದನ ಸೇವೆ (Reprographic service ) ಪ್ರಸ್ತುತ ಅರಿವು ಸೇವೆ (current awareness service) ವೃತ್ತ ಪತ್ರಿಕೆಗಳಿಂದ ವರದಿ ಸಂಗ್ರಹ (collection of News papers report) ಇಂಟರ್‌ನೆಟ್ ಮೂಲಕ ಮಾಹಿತಿ

ಹುಡುಕುವ ಸೇವೆ (Searching information through internet) ಇತ್ಯಾದಿಗಳೆಲ್ಲವು ಶೈಕ್ಷಣಿಕ ಕೆಲಸಗಳೇ ಆಗಿವೆ ಎಂದು ತಿಳಿಸಿರುತ್ತಾರೆ.

ಈಗಾಗಲೇ ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಗ್ರಂಥಪಾಲಕರ ಹುದ್ದೆಯನ್ನು ಬೋಧಕ (ನಾನ್ ವಕೇಷನಲ್) ಎಂದು ಪರಿಗಣಿಸಿರುವುದನ್ನು ಸಹ ಗಮನಿಸಲಾಗಿದೆ. ಅಲ್ಲದೆ ರಾಜ್ಯದ ವಿಶ್ವವಿದ್ಯಾಲಯಗಳು ಗ್ರಂಥಾಲಯ ವಿಜ್ಞಾನದಲ್ಲಿರುವ ಒಂದು ವರ್ಷದ ಪದವಿ ಕೋರ್ಸಿನ (ಬಿ.ಲಿಬ್ ಸೈನ್ಸ್) ಬದಲಾಗಿ ಎರಡು ಶೈಕ್ಷಣಿಕ ವರ್ಷಗಳ M.Lib.Sc,/ M.L.I.Sc ಎಂದು ಮಾರ್ಪಡಿಸಿ, ಶೈಕ್ಷಣಿಕ ಬದಲಾವಣೆ ಮಾಡಿರುವುದರಿಂದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಪದವಿ ಪೂರ್ವ ಕಾಲೇಜುಗಳ ವೃಂದ ಮತ್ತು ನೇಮಕಾತಿ ನಿಯಮಗಳು 1998 ರಲ್ಲಿ ಗ್ರಂಥಪಾಲಕರ ಹುದ್ದೆಯ ನೇಮಕಾತಿಗೆ M.Lib.Sc,/ M.L.I.Sc ಅನ್ನು ಕನಿಷ್ಟ ವಿದ್ಯಾರ್ಹತೆಯನ್ನಾಗಿ ನಿಗದಿಗೊಳಿಸಬೇಕಾಗಿದೆ. ಆದ್ದರಿಂದ ಈ ಬಗ್ಗೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ಪದವಿ ಪೂರ್ವ ಕಾಲೇಜುಗಳ ವೃಂದ ಮತ್ತು ನೇಮಕಾತಿ ನಿಯಮ 1998 ರಲ್ಲಿ ಗ್ರಂಥಪಾಲಕರ ನೇಮಕಾತಿಗೆ ಸಂಬಂಧಿಸಿದಂತೆ ಸೂಕ್ತವಾಗಿ ತಿದ್ದುಪಡಿ ಮಾಡಲು ಸೂಚಿಸಿರುತ್ತಾರೆ.

ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರಿ ಆದೇಶ ಸಂಖ್ಯೆ: ಇಡಿ 68 ಟಿಪಿಯು 2006
## ಬೆಂಗಳೂರು, ದಿನಾಂಕ 14ನೇ ಜೂನ್ 2007.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ರಾಜ್ಯದ ಪದವಿ ಪೂರ್ವ ಶಿಕ್ಷಣಕ್ಕೆ ಸಂಬಂಧಿಸಿದ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಸ್ವತಂತ್ರ / ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿ ಗ್ರಂಥಪಾಲಕರ ಹುದ್ದೆಯ ನೇಮಕಾತಿಗೆ ಪದವಿ ಪೂರ್ವ ಕಾಲೇಜುಗಳ ವೃಂದ ಮತ್ತು ನೇಮಕಾತಿ ನಿಯಮಗಳು 1998ಕ್ಕೆ ತಿದ್ದುಪಡಿಯನ್ನು ತಂದು ವಿದ್ಯಾರ್ಹತೆಯನ್ನು ನಿಗದಿಪಡಿಸುವುದನ್ನು ಬಾಕಿ ಇಟ್ಟು ಹಾಗೂ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಗ್ರಂಥಪಾಲಕರ ಹುದ್ದೆಯನ್ನು " ಬೋಧಕ " (Non vocational ) ಹುದ್ದೆಯನ್ನಾಗಿ ಪರಿಗಣಿಸಿ ಆದೇಶಿಸಿದೆ.

### ಷರತ್ತುಗಳು

1) ಈ ಪ್ರಸ್ತಾವನೆಯಿಂದ ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊರೆ ಆಗಬಾರದು.
2) ಗ್ರಂಥಪಾಲಕರ ಹುದ್ದೆಯಿಂದ ಪ್ರಾಚಾರ್ಯರ ಹುದ್ದೆಗೆ ಪದೋನ್ನತಿ ಹೊಂದಲು, ಅರ್ಹತೆ ನೀಡಲು ಬರುವುದಿಲ್ಲ. ಹಾಗಾಗಿ ಪ್ರಾಚಾರ್ಯರ ಹುದ್ದೆಗೆ ಪದೋನ್ನತಿಗೆ ಪರಿಗಣಿಸಬಾರದು.

ಸ್ನಾತಕೋತ್ತರ ಪದವಿಯಲ್ಲಿ ಶೇ. 55 ಕನಿಷ್ಟ ವಿದ್ಯಾರ್ಹತೆಯಾಗಿ ನಿಗಧಿಪಡಿಸುವ ಬಗ್ಗೆ ಪದವಿ ಪೂರ್ವ ಕಾಲೇಜುಗಳ ವೃಂದ ಮತ್ತು ನೇಮಕಾತಿ ನಿಯಮಗಳು 1998ಕ್ಕೆ ಸೂಕ್ತ ತಿದ್ದುಪಡಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

4) ಗ್ರಂಥಪಾಲಕರ ಹುದ್ದೆಗೆ ಸರ್ಕಾರವು ನಿಗಧಿಪಡಿಸಿದ ವೇತನವು, ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಹಾಗೂ ರಾಜ್ಯ ಸರ್ಕಾರದ ವೇತನಶ್ರೇಣಿಯಲ್ಲಿರಬೇಕು.

5) ಪದವಿ ಪೂರ್ವ ಕಾಲೇಜುಗಳಲ್ಲಿನ ಗ್ರಂಥಪಾಲಕರಿಗೆ ಯು.ಜಿ.ಸಿ. ಅಥವಾ ಇನ್ನಾವುದೇ ವೇತನ ಶ್ರೇಣಿಯನ್ನು ನೀಡಲು ಪರಿಗಣಿಸಬಾರದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

[ ಎಂ.ಎಂ.ಹಿರೇಮಠ ]
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.

ಇವರಿಗೆ:-

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು - 1 ಇದನ್ನು ರಾಜ್ಯಪತ್ರದಲ್ಲಿ ಪ್ರಕಟಿಸಲು ಹಾಗೂ 500 ಪ್ರತಿಗಳನ್ನು ಪ್ರೌಢ-ಬಿ ಶಾಖೆಗೆ ಒದಗಿಸಲು ಕೋರಲಾಗಿದೆ.

ಪ್ರತಿಗಳು:

1) ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, 18ನೇ ಅಡ್ಡ ರಸ್ತೆ, ಬೆಂಗಳೂರು.
2) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು-1.
3) ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ. (ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರ ಮುಖಾಂತರ).
4) ಆಪ್ತ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಕಾರ್ಯದರ್ಶಿಗಳ ಆಪ್ತ ಶಾಖೆ.
5) ಸಹ ಕಾರ್ಯದರ್ಶಿಗಳು / ಉಪ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ, ಬೆಂಗಳೂರು.
6) ಅಧ್ಯಕ್ಷರು, ಕರ್ನಾಟಕ ರಾಜ್ಯ ಪದವಿ ಪೂರ್ವ ಮಹಾವಿದ್ಯಾಲಯಗಳ ಗ್ರಂಥಪಾಲಕರ ಸಂಘ, ಗದಗ ಇವರಿಗೆ ಮಾಹಿತಿಗಾಗಿ.
7) ರಾಜ್ಯ ಮಾಹಿತಿ ಕೇಂದ್ರ, ಶಿಕ್ಷಣ ಇಲಾಖೆ, 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
8) ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.